International Journal of Kannada Research
www.kannadajournal.com

**ISSN: 2454–5813**
IJKR 2021; 7(4): 131-135
© 2021 IJKR
www.kannadajournal.com
Received: 28-08-2021
Accepted: 30-09-2021

**ನಂದಿನಿ ಕೆ.ಎಲ್**
ಸಮೂಹ ಮತ್ತು ಪತ್ರಿಕೋದ್ಯಮ ವಿಭಾಗ ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಕರ್ನಾಟಕ

**ಡಾ. ಎಸ್.ಮಮತ**
ಸಹಾಯಕ ಪ್ರಾಧ್ಯಾಪಕರು ಸಮೂಹ ಮತ್ತು ಪತ್ರಿಕೋದ್ಯಮ ವಿಭಾಗ ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಕರ್ನಾಟಕ

**Corresponding Author:**
**ಡಾ. ಎಸ್.ಮಮತ**
ಸಹಾಯಕ ಪ್ರಾಧ್ಯಾಪಕರು ಸಮೂಹ ಮತ್ತು ಪತ್ರಿಕೋದ್ಯಮ ವಿಭಾಗ ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ಕರ್ನಾಟಕ

# ಕನ್ನಡ ಸಿನಿಮಾ ರಂಗಕ್ಕೆ ಡಾ. ಅಂಬರೀಶ್‌ರವರ ಕೊಡುಗೆ: ಒಂದು ಅಧ್ಯಯನ

**ನಂದಿನಿ ಕೆ.ಎಲ್, ಡಾ. ಎಸ್.ಮಮತ**

ಕನ್ನಡ ಸಿನಿರಂಗದ ಅಜಾತ ಶತ್ರು ಡಾ. ಅಂಬರೀಶ್. ಇವರು ಸಿನಿಮಾ ರಂಗಕ್ಕೆ ಬರುವ ಮುಂಚೆ ಆಗಲೇ ಕನ್ನಡ ಚಿತ್ರರಂಗಕ್ಕೆ ವಯಸ್ಸು 38 ಆಗಿತ್ತು. ಮೂಕಿ ಚಿತ್ರಗಳು, ವಾಕ್ಚಿತ್ರಗಳು, ಕಪ್ಪು ಬಿಳುಪಿನ ಸಿನಿಮಾಗಳ ಯುಗ ಅಂತ್ಯಗೊಂಡಿತ್ತು. ಕನ್ನಡ ಸಿನಿಮಾ ರಂಗದ ಮೊದಲ ಮೂಕಿ ಚಿತ್ರದ ನಾಯಕ ಎ.ವಿ.ವರದಾಚಾರ್ಯರು, ಕನ್ನಡ ವಾಕ್ಚಿತ್ರ 'ಸತಿ ಸುಲೋಚನಾ' ನಾಯಕರಾಗಿ ಸುಬ್ಬಯ್ಯ ನಾಯ್ಡು, ಗುಬ್ಬಿ ವೀರಣ್ಣನವರು, ಡಾ.ರಾಜ್ ಕುಮಾರ್, ಕಲ್ಯಾಣ್ ಕುಮಾರ್, ಉದಯ ಕುಮಾರ್ ಮುಂತಾದ ನಾಯಕರ ಪ್ರವೇಶವೂ ಆಗಿತ್ತು. ಈ ನಡುವೆಯೇ ಕನ್ನಡದ ಮತ್ತೋರ್ವ ನಾಯಕ ಡಾ. ವಿಷ್ಣುವರ್ಧನ್ ಜತೆಯಾಗಿ ಡಾ. ಅಂಬರೀಶ್ ಸಿನಿಮಾ ರಂಗಕ್ಕೆ ಪದಾರ್ಪಣೆ ಮಾಡಿದರು.

ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರಹಾವು' ಚಿತ್ರದ ಮೂಲಕ 1972ರಲ್ಲಿ ಡಾ. ಅಂಬರೀಶ್ ಅವರು ಖಳನಾಯಕರಾಗಿ ಚಿತ್ರರಂಗ ಪ್ರವೇಶ ಮಾಡಿದರು. ಆನಂತರ ಸಹ ಕಲಾವಿದರಾಗಿ ಸಿನಿಯಾನ ಮುಂದುವರೆಸಿದರು. ಎಸ್.ವಿ. ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ಅಂತ' ಸಿನಿಮಾ ಮೂಲಕ ನಾಯಕನಟರಾದರು. ಅಲ್ಲಿಂದ ಶುರುವಾದ ನಾಯಕನ ಸಿನಿಪಯಣ ಸುದೀರ್ಘ ನಲವತ್ತಾರು ವರ್ಷಗಳ ಕಾಲ ಸತತವಾಗಿ ನಡೆಯಿತು.

ನಟರಾದರು, ಡಾ.ರಾಜ್‌ಕುಮಾರ್ ನಂತರ ಸಿನಿಮಾ ರಂಗಕ್ಕೆ ಸಾರಥಿಯಾಗಿಯೂ ಕೆಲಸ ಮಾಡಿದರು. ಸಿನಿಮಾ ರಂಗದ ಬೆಳವಣಿಗೆಗೆ ಅವರು ನೀಡಿದ ಕೊಡುಗೆ ಅಪಾರ. ಕಲಾವಿದರ ಸಂಘದ ಕಟ್ಟಡ, ನ್ಯಾಯಯುತವಾದ ರಾಜಿ ಸಂಧಾನಗಳು, ಚಿತ್ರೀಕರಣಕ್ಕೆ ಬೇಕಾದ ಸೌಲಭ್ಯಗಳು ಸೇರಿದಂತೆ ನಾನಾ ರೀತಿಯ ಕೆಲಸಗಳನ್ನು ಅವರು ಚಿತ್ರರಂಗಕ್ಕಾಗಿ ಮಾಡಿದ್ದಾರೆ. ಡಾ. ಅಂಬರೀಶ್ ಕೇವಲ ನಟರಾಗಿರಲಿಲ್ಲ. ಅವರು ರಾಜಕಾರಣಿಯೂ ಆಗಿದ್ದರು. ಕೇಂದ್ರ ಮತ್ತು ಕರ್ನಾಟಕ ಸರಕಾರದಲ್ಲಿ ಮಂತ್ರಿಯೂ ಆಗಿದ್ದರು. ಹಾಗಾಗಿ ರಾಜಕಾರಣಿಯೂ ಆಗಿ ಸಿನಿಮಾ ರಂಗಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ.

## ಪೀಠಿಕೆ

1934ರಲ್ಲಿ ಶುರುವಾದ ಕನ್ನಡ ಚಿತ್ರರಂಗದ ಯಾಣಕ್ಕೆ ಈಗ 88 ವರ್ಷಗಳ ಇತಿಹಾಸವಿದೆ. ಭಾರತೀಯ ಸಿನಿಮಾಗಳು ಮೊದ ಮೊದಲು ಆರಂಭವಾಗಿದ್ದು ಮುಂಬಯಿಯಲ್ಲಿ. ನಂತರದ ದಿನಗಳಲ್ಲಿ ಅದು ಮದ್ರಾಸು, ಬೆಂಗಳೂರು ಸೇರಿದಂತೆ ಭಾರತೀಯ ಹಲವು ಪ್ರಾದೇಶಿಕ ಭಾಷೆಗಳಲ್ಲಿ ತನ್ನ ಅಸ್ತಿತ್ವವನ್ನು ಸಾಧಿಸುತ್ತಾ ಸಾಗಿತು.

ಹಾಗಾದರೆ, ಕನ್ನಡ ಸಿನಿಮಾ ರಂಗವೆಂದರೆ ಯಾವುದು ಅಂದರೆ, ಕರ್ನಾಟಕದಲ್ಲಿ ನಿರ್ಮಾಣವಾಗುವ ಕನ್ನಡ ಚಿತ್ರಗಳನ್ನು ಒಳಗೊಂಡಿರುವ ಒಂದು ವ್ಯವಸ್ಥೆಯೇ ಕನ್ನಡ ಚಿತ್ರರಂಗವಾಯಿತು. ಜೊತೆಗೆ ತುಳು, ಕೊಂಕಣಿ ಭಾಷೆಗಳೂ ಇದರೊಂದಿಗೆ ಸೇರ್ಪಡೆಯಾದವು.

ಕನ್ನಡ ಸಿನಿಮಾ ರಂಗಕ್ಕೆ ಮೂಲಬೇರು ರಂಗಭೂಮಿ. ಹಾಗಾಗಿ ರಂಗಭೂಮಿಯ ನಾಟಕಗಳನ್ನೇ ಆಧರಿಸಿ ಚಿತ್ರಗಳ ಮೂಲಕ ಸಿನಿಮಾ ರಂಗ ಅಸ್ತಿತ್ವಕ್ಕೆ ಬಂತು. ಮಾಚ್ 4, 1934ರಲ್ಲಿ ತೆರೆಕಂಡ 'ಸತಿ ಸುಲೋಚನಾ' ಕನ್ನಡದ ಮೊಟ್ಟ ಮೊದಲ ವಾಕ್ಚಿತ್ರವಾಯಿತು. ರಾಮಾಯಣವನ್ನು

ಆಧಾರವಾಗಿಟ್ಟುಕೊಂಡು ಈ ಸಿನಿಮಾವನ್ನು ಮಾಡಲಾಗಿತ್ತು. ಅದಕ್ಕೂ ಮೊದಲು ಮೂಕಿಚಿತ್ರಗಳು ಕನ್ನಡದಲ್ಲಿ ಬಂದವು. ಎ.ವಿ.ವರದಾಚಾರ್ಯರು ಕನ್ನಡದಲ್ಲಿ ಚಿತ್ರೀಕರಣಗೊಂಡ ಮೂಕಿ ಚಿತ್ರದ ಮೊದಲ ನಾಯಕ. ನಂತರದ ದಿನಗಳಲ್ಲಿ 1925ರಲ್ಲಿ ಗುಬ್ಬಿ ಚನ್ನಬಸವೇಶ್ವರ ಕಂಪೆನಿಯಲ್ಲಿ ತರೀಕೆರೆಯಲ್ಲಿ ಪ್ರದರ್ಶನಗೊಳ್ಳುತ್ತಿದ್ದ 'ಮಹಾತ್ಮ ಕಬೀರ' ನಾಟಕವನ್ನೇ ಚಿತ್ರಿಸಿ ಚಿತ್ರ ತಯಾರಿಸಿದರು. ಈ ಸಿನಿಮಾದ ಮೂಲಕ ಅಭಿನಯ ಶಿರೋಮಣಿ ಎಂದೇ ಖ್ಯಾತರಾಗಿದ್ದ ಸಿ.ಬಿ. ಮಲ್ಲಪ್ಪನವರು ಸಿನಿಮಾ ನಾಯಕರಾಗಿ ಗುರುತಿಸಿಕೊಂಡರು.

ಕಾಲಕ್ರಮೇಣ ಮೂಕಿ ಚಿತ್ರಗಳಲ್ಲಿ ಆಸಕ್ತಿ ಕಡಿಮೆಯಾಗುತ್ತಾ ಹೋದಂತೆ, ವಾಕ್ಚಿತ್ರಗಳು ಕನ್ನಡದಲ್ಲಿ ಲಗ್ಗೆ ಇಟ್ಟವು. ಕನ್ನಡ ವಾಕ್ಚಿತ್ರ 'ಸತಿ ಸುಲೋಚನಾ' ಮೂಲಕ ಮೊಟ್ಟ ಮೊದಲ ನಾಯಕರಾಗಿ ಸುಬ್ಬಯ್ಯ ನಾಯ್ಡು ದಾಖಲಾದರು. ಕನ್ನಡ ಸಿನಿಮಾರಂಗಕ್ಕೆ ಆಗ ಇಪ್ಪತ್ತರ ಹರೆಯ. ಈ ಸಮಯದಲ್ಲಿ 'ಬೇಡರ ಕಣ್ಣಪ್ಪ' ಚಿತ್ರದ ಮೂಲಕ ಡಾ.ರಾಜ್‌ಕುಮಾರ್ ಅವರ ಆಗಮನವಾಯಿತು. 1954ರಲ್ಲಿ ಬಿಡುಗಡೆಯಾದ ಈ ಸಿನಿಮಾ ಕನ್ನಡ ಸಿನಿಮಾ ರಂಗದ ಮೈಲುಗಲ್ಲಿಗೆ ಸಾಕ್ಷಿ ಆಯಿತು. ರಾಜ್ ಕುಮಾರ್ ಅವರ ನಂತರ ಸಿನಿಮಾ ರಂಗವನ್ನು ಮತ್ತಷ್ಟು ಶ್ರೀಮಂತಗೊಳಿಸಿದ ನಟರಲ್ಲಿ ವಿಷ್ಣುವರ್ಧನ್ ಕೂಡ ಒಬ್ಬರು. 'ವಂಶವೃಕ್ಷ' ಚಿತ್ರದ ಮೂಲಕ ಇವರು ಸಿನಿಮಾ ರಂಗಕ್ಕೆ ಪದಾರ್ಪಣೆ ಮಾಡಿದ್ದರೂ, ನಾಯಕನಾಗಿ ಕಾಣಿಸಿಕೊಂಡಿದ್ದು ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರಹಾವು' ಚಿತ್ರದ ಮೂಲಕ. 1973ರಲ್ಲಿ ತೆರೆಕಂಡ ಈ ಚಿತ್ರದ ಮೂಲಕವೇ ಡಾ. ಅಂಬರೀಶ್ ಕೂಡ ಸಿನಿಮಾ ರಂಗಕ್ಕೆ ಬಂದರು. ಅದು ಖಳನಾಯಕನ ಪಾತ್ರದ ಮೂಲಕ. ಈ ಸಿನಿಮಾದಲ್ಲಿ ವಿಷ್ಣುವರ್ಧನ್ ನಾಯಕನಾದರೆ, ಅಂಬರೀಶ್ ಅವರದ್ದು ಖಳ ನಾಯಕನ ಪಾತ್ರವಾಗಿತ್ತು.

ಡಾ. ಅಂಬರೀಶ್ ಅವರು ಸಿನಿಮಾ ರಂಗಕ್ಕೆ ಬರುವ ಮುನ್ನ, ಆಗಲೇ ಚಿತ್ರರಂಗದಲ್ಲಿ ಆರ್.ನಾಗೇಂದ್ರರಾವ್, ಗುಬ್ಬಿ ವೀರಣ್ಣ, ಬಿ.ಆರ್.ಪಂತಲು, ದೇವುಡು, ಸುಬ್ಬಯ್ಯ ನಾಯ್ಡು, ಹೊನ್ನಪ್ಪ ಭಾಗವತರ್, ಡಾ.ರಾಜ್‌ಕುಮಾರ್, ಹುಣಸೂರು ಕೃಷ್ಣಮೂರ್ತಿ, ಬಾಲಕೃಷ್ಣ, ಕಲ್ಯಾಣ ಕುಮಾರ್, ನರಸಿಂಹರಾಜು, ಕೆ.ಎಸ್. ಅಶ್ವತ್ಥ್, ಉದಯಕುಮಾರ್, ಶ್ರೀನಾಥ್, ರಾಜೇಶ್, ಆರ್.ಎನ್. ಸುದರ್ಶನ್, ಪ್ರಭಾಕರ್ ಮುಂತಾದ ಕಲಾವಿದರು ನಾಯಕನಟರಾಗಿ ತೆರೆಯ ಮೇಲೆ ಮಿಂಚಿದ್ದರು. ಇವರ ನಂತರ ಬಂದವರು ಡಾ. ಅಂಬರೀಶ್. ಇಲ್ಲಿಂದ ಸಿನಿಮಾ ರಂಗದಲ್ಲಿ ಅಂಬರೀಶ್ ಪರ್ವವೇ ಶುರುವಾಯಿತು. 1972 ರಿಂದ ಶುರುವಾದ ಇವರ ಸಿನಿಯಾನ ನಿರಂತರವಾಗಿ 2018ರವರೆಗೂ ಸಾಗಿತು. ಸುದೀರ್ಘ 46 ವರ್ಷಗಳ ಇವರು ಸಿನಿಮಾ ರಂಗಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಕೇವಲ ನಟನೆ ಮಾತ್ರವಲ್ಲ, ಕನ್ನಡ ಚಿತ್ರರಂಗದ ಬೆಳವಣಿಗೆಗೆ ಇವರ ಕೊಡುಗೆ ಅಪಾರ.

**ಅಧ್ಯಯನದ ಉದ್ದೇಶ**

1. ಖಳನಾಯಕನಾಗಿ, ಪೋಷಕ ಪಾತ್ರಗಳನ್ನು ಮಾಡುತ್ತಿದ್ದ ಡಾ. ಅಂಬರೀಶ್ ನಾಯಕ ನಟರಾಗಿ ಬೆಳೆದ ಪರಿಯೇ ಅಚ್ಚರಿ. ಈ ಹಿಂದಿನ ಸಾಧನೆಯನ್ನು ಗುರುತಿಸುವುದು.
2. ಡಾ. ಅಂಬರೀಶ್ ಸಿನಿಮಾ ರಂಗಕ್ಕೆ ಬರುವ ಮುಂಚೆ ಸಾಕಷ್ಟು ಹಿರಿಯ ಕಲಾವಿದರು ಸಿನಿಮಾ ರಂಗದಲ್ಲಿದ್ದರು. ಆದರೂ, ಸಿನಿಮಾ ರಂಗದ ಮುಂದಾಳತ್ವ ವಹಿಸಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅವುಗಳನ್ನು ಗುರುತಿಸುವಿಕೆ.
3. ಅಸಕ್ತ ಕಲಾವಿದರಿಗೆ ನೆರವು. ತಂತ್ರಜ್ಞರಿಗೆ ನೆರವು ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ ಸೇರಿದಂತೆ ಹತ್ತು ಹಲವು ಕೆಲಸಗಳನ್ನು ಮಾಡುವ ಮೂಲಕ ಸಿನಿಮಾ ರಂಗದ ಬೆಳವಣಿಗೆಗೆ ಡಾ. ಅಂಬರೀಶ್ ಕಾರಣವಾಗಿದ್ದಾರೆ. ಈ ಕುರಿತಾಗಿ ಅರಿಯುವುದು.
4. ಕಲಾವಿದರ ಸಂಘದ ನಿರ್ಮಾಣ ಮಾಡುವ ಮೂಲಕ ಕಲಾವಿದರ ಅಭ್ಯುದಯಕ್ಕೆ ಕಾರಣವಾಗಿದ್ದಾರೆ. ಯುವ ಕಲಾವಿದರಿಗೆ ಮಾರ್ಗದರ್ಶನ, ಸಲಹೆ, ಸೂಚನೆ, ಪ್ರೋತ್ಸಾಹ ನೀಡುತ್ತಾ ಚಿತ್ರರಂಗದ ಬೆಳವಣಿಗೆಗೆ ಕಾರಣವಾಗಿದ್ದಾರೆ. ಈ ಕುರಿತಾಗಿ ಅರಿಯುವುದು.
5. ಅವರ ಸಿನಿಮಾಗಳ ಮೂಲಕ ಕೇವಲ ಅಭಿಮಾನಿಗಳಿಗೆ ಮಾತ್ರವಲ್ಲ, ಸಿನಿಮಾ ರಂಗಕ್ಕೂ ಒಂದು ಮಾದರಿಯಂತಾಗಿದ್ದಾರೆ. ಇವರ ಸಿನಿಮಾಗಳ ಮಾದರಿಯಲ್ಲೇ ನಂತರದ ದಿನಗಳಲ್ಲಿ ಹಲವು ಚಿತ್ರಗಳು ಬಂದಿವೆ. ಈ ಕುರಿತು ವಿಶ್ಲೇಷಿಸುವುದು.

**ಡಾ. ಅಂಬರೀಶ್ ವ್ಯಕ್ತಿ– ವ್ಯಕ್ತಿತ್ವ**

ಡಾ. ಅಂಬರೀಶ್ ಅವರು ಸಿನಿಮಾ ರಂಗಕ್ಕೆ ನೀಡಿದ ಕೊಡುಗೆಯನ್ನು ಅರಿಯಬೇಕಾದರೆ, ಅವರ ವ್ಯಕ್ತಿತ್ವವನ್ನು ವಿಶ್ಲೇಷಿಸುವುದು ಅವಶ್ಯ. ಅಂಬರೀಶ್ ಅವರು ಹುಟ್ಟಿದ್ದು 1952ರಲ್ಲಿ. ಮಂಡ್ಯ ಜಿಲ್ಲೆಯ ದೊಡ್ಡ ಅರಸನಕೆರೆ ಹುಟ್ಟೂರು. ಸ್ಥಿತಿವಂತ ಕುಟುಂಬದಲ್ಲಿ ಜನಿಸಿದ ಇವರಿಗೆ ಬದುಕಿನಲ್ಲಿ ಅಷ್ಟೇನೂ ಕಷ್ಟಗಳು ಬರಲಿಲ್ಲ. ಅಪ್ಪ ಸರಕಾರಿ ನೌಕರಿಯಲ್ಲಿದ್ದರು. ತಾತ ಪಿಟೀಲು ಚೌಡಯ್ಯನವರು ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ಸಂಸ್ಥಾನಕ್ಕೆ ಹತ್ತಿರದವರು. ಇಷ್ಟೆಲ್ಲ ಹಿನ್ನೆಲೆಯಿದ್ದರೂ, ಡಾ. ಅಂಬರೀಶ್ ಮಾತ್ರ ತಮ್ಮ ಬದುಕನ್ನು ಬೇರೆಯ ರೀತಿಯಲ್ಲೇ ಕಟ್ಟಿಕೊಂಡರು.

ಡಾ. ಅಂಬರೀಶ್ ಸಿನಿಮಾ ರಂಗಕ್ಕೆ ಬಂದಿದ್ದು ಆಕಸ್ಮಿಕ. ಅವರು ಯಾವತ್ತೂ ತಾವು ಬಣ್ಣ ಹಚ್ಚುತ್ತೇನೆ ಅಂದುಕೊಂಡವರಲ್ಲ. ಗೆಳೆಯರ ಸಹವಾಸ ಮತ್ತು ಒತ್ತಾಯದಿಂದಾಗಿ ಚಿತ್ರರಂಗಕ್ಕೆ ಪ್ರವೇಶಿಸಿದರು. ಇಲ್ಲಿಯೂ ಅವರು ನೆಲೆ ನಿಲ್ಲುತ್ತಾರೆ ಎಂಬ ಭರವಸೆ ಕುಟುಂಬಕ್ಕೆ ಇರಲಿಲ್ಲ. ಆದರೆ, ಅದು ಹಾಗೆ ಆಗಲಿಲ್ಲ. ಇವರ ಮೇಲಿನ ಭರವಸೆ ಮತ್ತು ಎಂತಹ ಪಾತ್ರ ಕೊಟ್ಟರೂ ಅದನ್ನು ಸಮರ್ಥವಾಗಿ ನಿಭಾಯಿಸಬಲ್ಲ ಜಾಣ್ಮೆಯಿಂದಾಗಿ ಗಟ್ಟಿಯಾಗಿ ನೆಲೆಯೂರಿದರು.

ಡಾ. ಅಂಬರೀಶ್ ಮೂಲತಃ ಸಂಘ ಜೀವಿ. ಸಿನಿಮಾ ರಂಗದ ಜತೆ ಜತೆಗೆ ರಾಜಕೀಯ ನಂಟು ಹೊಂದಿದರು. ವಿಧಾನಸಭಾ ಸದಸ್ಯರಾಗಿ, ರಾಜ್ಯಸಭಾ ಸದಸ್ಯರಾಗಿ, ಕೇಂದ್ರ ಮತ್ತು ರಾಜ್ಯಗಳಲ್ಲಿ ಮಂತ್ರಿಯಾಗಿ ಸಿನಿಮಾ ರಂಗಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಸಿನಿಮಾ ರಂಗದಲ್ಲಿದ್ದುಕೊಂಡು ರಾಜಕಾರಣಿಯಾಗಿ, ರಾಜಕೀಯ ಕ್ಷೇತ್ರದಲ್ಲಿದ್ದುಕೊಂಡು ಸಿನಿಮಾ ನಟನಾಗಿ ಎರಡೂ ಕ್ಷೇತ್ರಕ್ಕೂ ಅವರ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಬಹುತೇಕ ಕನ್ನಡ ಸಿನಿಮಾಗಳನ್ನಷ್ಟೇ ಮಾಡಿಕೊಂಡಿದ್ದರೂ, ಭಾರತೀಯ ಸಿನಿಮಾ ರಂಗದ, ಅದರಲ್ಲೂ ದಕ್ಷಿಣದ ಅಷ್ಟೂ ಹೆಸರಾಂತ ನಟ ನಟಿಯರ ಜತೆ, ನಿರ್ದೇಶಕ, ನಿರ್ಮಾಪಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು.

ಸಿನಿಮಾ ರಂಗಕ್ಕೆ ಮಾತ್ರ ಸೀಮಿತವಾಗಿ ಉಳಿಯದೇ ಸಮಾಜದಲ್ಲಿ ಅನ್ಯಾಯ ನಡೆದಾಗೆಲ್ಲ ಯಾವುದೇ ಮುಲಾಜಿಗೆ ಒಳಗಾಗದೇ ಪ್ರತಿಭಟಿಸುತ್ತಿದ್ದರು. ಉತ್ತಮ ಸ್ನೇಹಿತರ ಬಳಗ ಹೊಂದಿದ್ದ ಅಂಬರೀಶ್ ಹಳ್ಳಿಗಾಡಿನ ಜನರ ಕಷ್ಟಕ್ಕೆ ಮೊದಲು ಸ್ಪಂದಿಸುತ್ತಿದ್ದರು. ಕರ್ನಾಟಕ ಹಾಗೂ ಮಂಡ್ಯ ಜಿಲ್ಲೆಯ ಅಭಿವೃದ್ಧಿಯಲ್ಲಿ ಡಾ. ಅಂಬರೀಶ್‌ರವರು ಮೈಲಿಗಲ್ಲು ಸೃಷ್ಟಿಸಿದ್ದಾರೆ. ಕೇವಲ ಒಂದೇ ಪಕ್ಷಕ್ಕೆ ಸೀಮಿತವಾಗಿರದೇ ಎಲ್ಲಾ ಪಕ್ಷದ ರಾಜಕೀಯ ನಾಯಕರ ಜೊತೆ

ಸ್ನೇಹಜೀವಿಯಾಗಿ ರಾಜಕೀಯ ರಂಗದಲ್ಲಿಯೇ ಮೇರು ವ್ಯಕ್ತಿತ್ವ ರೂಪಿಸಿದ್ದಾರೆ. ಅನೇಕರ ಸಂಕಷ್ಟಕ್ಕೆ ಮಿಡಿದಿದ್ದಾರೆ. ಆರ್ಥಿಕ ಸಹಾಯ ಮಾಡಿದ್ದಾರೆ. ಅದೆಷ್ಟೋ ಹೆಣ್ಣು ಮಕ್ಕಳಿಗೆ ಶೈಕ್ಷಣಿಕವಾಗಿ ಸಹಾಯ ಮಾಡಿದ್ದಾರೆ. ಸಾಕಷ್ಟು ಜನರ ಚಿಕಿತ್ಸೆಗಾಗಿ ಸ್ಪಂದಿಸಿದ್ದಾರೆ. ಹಾಗಾಗಿ ಇವತ್ತಿಗೂ ಅವರನ್ನು ಜನರು ಅಭಿಮಾನದಿಂದ "ಕಲಿಯುಗದ ಕರ್ಣ" ಎಂದು ಕರೆಯುತ್ತಾರೆ.

**ಸಿನಿಮಾ ರಂಗಕ್ಕೆ ಮಾದರಿಯ ಚಿತ್ರಗಳ ಕೊಡುಗೆ:**

ಡಾ. ಅಂಬರೀಶ್ ಸಿನಿಮಾ ರಂಗಕ್ಕೆ ಬಂದಿದ್ದು ಖಳನಟನಾಗಿ. 'ನಾಗರಹಾವು' ಇವರ ಮೊದಲ ಸಿನಿಮಾ. ಈ ಸಿನಿಮಾದಲ್ಲಿ ಖಳನಟನೆಂದರೆ ಹೀಗಿಯೇ ಇರಬೇಕು ಎನ್ನುವುದಕ್ಕೆ ಮಾದರಿಯಾದರು. ನಂತರದಲ್ಲಿ ಬಂದ ಅದೆಷ್ಟೋ ನಟರು, ಇವರ ಮಾದರಿಯನ್ನೇ ಅನುಸರಿಸಿದ್ದಾರೆ. ಖಳನಟನೆಂದರೆ ನಾಗರಹಾವು ಸಿನಿಮಾದ 'ಜಲೀಲ' ಪಾತ್ರ ಎನ್ನುವಷ್ಟರ ಮಟ್ಟಿಗೆ ಅದು ಟ್ರೆಂಡ್ ಸೃಷ್ಟಿ ಮಾಡಿತು.

ನಂತರ ತೆರೆಕಂಡ ವಾದಿರಾಜ್ ನಿರ್ದೇಶನದ 'ಸೀತೆಯಲ್ಲ ಸಾವಿತ್ರಿ '(1973), ಎ.ನಾರಾಯಣ್ ನಿರ್ದೇಶನದ 'ಚಾಮುಂಡೇಶ್ವರಿ ಮಹಿಮೆ' (1974), ಪುಟ್ಟಣ್ಣ ನಿರ್ದೇಶನದ 'ಶುಭಮಂಗಳ' (1975), ಸಂಗ್ರಾಮ್ ನಿರ್ದೇಶನದ 'ಮಹದೇಶ್ವರ ಪೂಜಾಫಲ' (1975), ಕೆ.ಎಲ್.ಸ್ವಾಮಿ ನಿರ್ದೇಶನದ 'ಭಾಗ್ಯಜ್ಯೋತಿ' (1975), ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ವಿಷಕನ್ಯೆ' (1975), ಎ.ಎಂ ಸಮೀಉಲ್ಲಾ ನಿರ್ದೇಶನದ 'ಒಂದೇ ರೂಪ ಎರಡು ಗುಣ' (1975), ವೈ.ಆರ್ ಸ್ವಾಮಿ ನಿರ್ದೇಶನದ 'ದೇವರ ಕಣ್ಣು' (1975), ಅಮೃತಂ ನಿರ್ದೇಶನದ 'ಹುಡುಗಾಟದ ಹುಡುಗಿ' (1976), ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಕಥಾಸಂಗಮ' (1976), ವಿ.ಟಿ.ತ್ಯಾಗರಾಜನ್ ನಿರ್ದೇಶನದ 'ಹೊಸಿಲು ಮೆಟ್ಟಿದ ಹೆಣ್ಣು' (1976), ಕೆ.ಎಸ್.ಆರ್ ದಾಸ್ ನಿರ್ದೇಶನದ 'ಬಂಗಾರದ ಗುಡಿ' (1976), ಅಮೃತಂ ನಿರ್ದೇಶನದ 'ಕನಸು ನನಸು' (1976), ಕೆ.ಎಸ್.ಎಸ್ ನಾರಾಯಣ್ ನಿರ್ದೇಶನದ 'ಧನಲಕ್ಷ್ಮಿ' (1977), ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ನಾಗರ ಹೊಳೆ' (1977), ಕೆ.ಎಸ್.ಎಲ್ ಸ್ವಾಮಿ ನಿರ್ದೇಶನದ 'ಮಾಗಿಯ ಕನಸು' (1977), ಎಸ್.ಎನ್.ಸಿಂಗ್ ನಿರ್ದೇಶನದ 'ಕಾಡ್ಗಿಚ್ಚು' (1977), ಬಿ ಗಿರಿಬಾಬು ನಿರ್ದೇಶನದ 'ಮನಸ್ಸಿನಂತೆ ಮಾಂಗಲ್ಯ' (1977) ಸಿನಿಮಾಗಳಲ್ಲಿ ಮುಖ್ಯ ಪೋಷಕ ಪಾತ್ರಧಾರಿಯಾಗಿ, ಖಳನಾಯಕನಾಗಿ ಜನರಿಗೆ ಮಾತ್ರವಲ್ಲ ಸಿನಿಮಾ ರಂಗಕ್ಕೆ ಒಂದು ಮಾದರಿಯ ಪಾತ್ರಗಳನ್ನು ನೀಡಿದರು.

ಕೆ.ಎಸ್.ಎಲ್.ಸ್ವಾಮಿ ನಿರ್ದೇಶನದ 'ಮುಗ್ಧಮಾನವ' (1977), ಎ.ಎಂ ಸಮೀಉಲ್ಲಾ ನಿರ್ದೇಶನದ 'ಚಿನ್ನ ನಿನ್ನ ಮುದ್ದಾಡುವೆ' (1977), ಎಸ್.ಕೆ ಚಾರಿ ನಿರ್ದೇಶನದ 'ಕುಂಕುಮ ರಕ್ಷೆ' (1977), ಕೆ.ಎಸ್.ಎಲ್ ಸ್ವಾಮಿ ನಿರ್ದೇಶನದ 'ಬನಶಂಕರಿ' (1977), ವೈ.ಆರ್ ಸ್ವಾಮಿ ನಿರ್ದೇಶನದ 'ಕುದುರೆ ಮುಖ' (1978), ಅಮೃತಂ ನಿರ್ದೇಶನದ 'ಹಳ್ಳಿ ಹೈದ' (1978), ಮಣಿಮುರುಗನ್ ನಿರ್ದೇಶನದ 'ಹಾವಿನ ಹೆಜ್ಜೆ' (1978), ವೈ.ಆರ್.ಸ್ವಾಮಿ ನಿರ್ದೇಶನದ 'ಮುಯ್ಯಿಗೆ ಮುಯ್ಯಿ' (1978), ರಾಮಣ್ಣ ನಿರ್ದೇಶನದ 'ಸಿರಿತನಕ್ಕೆ ಸವಾಲ್' (1978), ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಪಡುವಾರಳ್ಳಿ ಪಾಂಡವರು' (1978), ಗೀತಪ್ರಿಯ ರಾಮಣ್ಣ ನಿರ್ದೇಶನದ 'ಅನುರಾಗ ಬಂಧನ' (1978), ಸುಧೀರ್ ಮೆನನ್ ರಾಮಣ್ಣ ನಿರ್ದೇಶನದ 'ಪ್ರತಿಮಾ' (1978), ಬಿ.ಮಧುಸುಧನ್ ನಿರ್ದೇಶನದ 'ಸ್ನೇಹ ಸೇಡು' (1978), ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಕಿಲಾಡಿ ಜೋಡಿ' (1978) ಈ ಸಿನಿಮಾಗಳ ಪಾತ್ರ ಪೋಷಣೆಯಂತೂ ಸಿನಿಮಾ ರಂಗಕ್ಕೆ ಬರುವ ಕಲಾವಿದರಿಗೆ ಪಾಠದಂತಿದ್ದವು.

'ನಾಗರಹಾವು' ಚಿತ್ರದ ಜಲೀಲ, 'ನಾಗರ ಹೊಳೆ'ಯಲ್ಲಿ ಆನೆ ಮೇಲೆ ಸವಾರಿ ಮಾಡುವ ಪಾತ್ರ, 'ಪಡುವಾರಹಳ್ಳಿ ಪಾಂಡವರು' ಸಿನಿಮಾದ ಮುಗ್ಧ ಹಳ್ಳಿಗನ ಪಾತ್ರ, 'ರಂಗನಾಯಕಿ' ಚಿತ್ರದ ರಂಗನಾಯಕಿಯ ಸಹೋದರ ರಾಮಣ್ಣನಾಗಿ, ಚಕ್ರವ್ಯೂಹ ಚಿತ್ರದಲ್ಲಿ ಯುವಕರ ಎದೆಯಲ್ಲಿ ಕಿಚ್ಚಚ್ಚಿಸುವ ಹೋರಾಟಗಾರನಾಗಿ, 'ಮಸಣದ ಹೂವು' ಸಿನಿಮಾದಲ್ಲಿ ತಲೆ ಹಿಡುಕನ ಪಾತ್ರದಲ್ಲಿ, 'ನ್ಯೂ ಡೆಲ್ಲಿ'ಯಲ್ಲಿ ಪತ್ರಕರ್ತ, 'ಒಡಹುಟ್ಟಿದವರು' 'ಮಂಡ್ಯದ ಗಂಡು', 'ಆಪರೇಷನ್ ಅಂತ', 'ದಿಗ್ಗಜರು' ಹೀಗೆ ಅಭಿನಯಕ್ಕೆ ಪೂರಕವಾದ ಪಾತ್ರಗಳನ್ನು ತಮ್ಮದೇ ಆದ ರೀತಿಯಲ್ಲಿ ಅಭಿನಯಿಸಿ ಮಾದರಿಯ ಮಾರ್ಗವಾಗಿಸಿದರು. ಈ ಚಿತ್ರಗಳ ನೆನಪು ಸಿನಿಮಾ ರಂಗದಲ್ಲಿ ಸದಾ ಇರಲಿದೆ.

**ಅಂಬರೀಶ್ ಅವರ ಕನಸು ಕಲಾವಿದರ ಕಟ್ಟಡ:**

ಕನ್ನಡ ಸಿನಿಮಾ ರಂಗ ಮೊದಲು ನೆಲೆಯೂರಿದ್ದು ಮದ್ರಾಸಿನಲ್ಲಿ. ಬಹುತೇಕ ಕನ್ನಡ ಚಿತ್ರಗಳು ಅಲ್ಲಿಯೇ ತಯಾರಾಗುತ್ತಿದ್ದವು. ಸ್ಟುಡಿಯೋ ಮತ್ತು ಚಿತ್ರೀಕರಣಕ್ಕೆ ಬೇಕಾದ ಸೌಲಭ್ಯಗಳು ಮದ್ರಾಸಿನಲ್ಲಿದ್ದ ಕಾರಣಕ್ಕಾಗಿ, ಇಲ್ಲಿನ ಕಲಾವಿದರು ಅಲ್ಲಿಗೆ ಹೋಗಿ ಚಿತ್ರೀಕರಣದಲ್ಲಿ ಭಾಗಿಯಾಗುತ್ತಿದ್ದರು. ಕೆಲವರು ಅಲ್ಲಿಯೇ ನೆಲೆಯೂರಿದ್ದರು. ಬೆಳಗ್ಗೆ ತಮಿಳು ಚಿತ್ರಗಳ ಚಿತ್ರೀಕರಣವಾದರೆ, ರಾತ್ರಿಯ ಬಿಡುವಿನ ವೇಳೆಯಲ್ಲಿ ಕನ್ನಡ ಚಿತ್ರಗಳ ಚಿತ್ರೀಕರಣಕ್ಕೆ ಸ್ಥಳವನ್ನು ಬಿಟ್ಟು ಕೊಡಲಾಗುತ್ತಿತ್ತು. ಬೆಂಗಳೂರಿನಿಂದ ಮದ್ರಾಸಿಗೆ ಹೋಗಿ ಶೂಟಿಂಗ್ ಮಾಡುವುದು ಕಷ್ಟದ ಕೆಲಸವೂ ಆಗಿತ್ತು. ಹೆಚ್ಚು ಖರ್ಚು ಆಗುತ್ತಿದ್ದರಿಂದ, ಅತೀ ಕಡಿಮೆ ಸಂಖ್ಯೆಯಲ್ಲಿ ಕನ್ನಡ ಚಿತ್ರಗಳು ನಿರ್ಮಾಣವಾಗುತ್ತಿದ್ದವು. ಹಾಗಾಗಿ ಕನ್ನಡ ಸಿನಿಮಾ ರಂಗ ಕನ್ನಡದ ನೆಲದಲ್ಲೇ ಇರಬೇಕು ಎನ್ನುವುದು ಬಹುತೇಕರ ಆಸೆಯಾಗಿತ್ತು. ಚಿತ್ರೀಕರಣ ಸೇರಿದಂತೆ, ಅದಕ್ಕೊಂದು ವ್ಯವಸ್ಥಿತ ಸಂಸ್ಥೆಯೊಂದು ತಲೆಯೆತ್ತಬೇಕು ಎನ್ನುವುದು ಬಹುಜನರ ಬೇಡಿಕೆಯಾಗಿತ್ತು. ಅದಕ್ಕೆ ಸ್ಪಂದನೆಯ ಕೆಲಸವೂ ನಡೆಯಿತು.

"ಕನ್ನಡದ ಬಹುತೇಕ ಸಿನಿಮಾಗಳು ಮದ್ರಾಸ್‌ನಲ್ಲಿಯೇ ತಯಾರಾಗುತ್ತಿದ್ದ ಕಾಲವದು. ಸಿನಿಮಾ ಸಂಬಂಧಿ ಚಟುವಟಿಕೆಗಳು ಕೂಡ ಅಲ್ಲಿಯೇ ನಡೆಯುತ್ತಿದ್ದವು. ಸಿನಿಮಾ ಸುದ್ದಿಗಳು ಕೂಡ ಅಲ್ಲಿಂದಲೇ ಬರಬೇಕಿತ್ತು. ಕಲಾವಿದರು ಕೂಡ ಅಲ್ಲಿಯೇ ಒಡಗೂಡುತ್ತಿದ್ದರು. ಅಲ್ಲಿಯೇ ಕಲಾವಿದರು ನೆಲೆಯೂರುವುದು ಅನಿವಾರ್ಯ ಕೂಡ ಆಗಿತ್ತು. ಇಂತಹ ವೇಳೆಯಲ್ಲಿ ಕಲಾವಿದರೇ ಸಂಘ ಮಾಡಿಕೊಂಡು, ಒಂದಷ್ಟು ಕೆಲಸವನ್ನು ಕನ್ನಡದಲ್ಲೇ ಮಾಡಬೇಕು" ಎನ್ನುವುದು ಪತ್ರಕರ್ತ ಗಂಗರತ್ನ ಅವರ ಉದ್ದೇಶವಾಗಿತ್ತು. ಅದನ್ನು ನಟ ಉದಯ ಕುಮಾರ್ ಮುಂದೆ ಇಟ್ಟರು. 1957ರಲ್ಲಿ ಈ ಕುರಿತು ಮದ್ರಾಸಿನಲ್ಲಿಯೇ ಸಭೆ ಸೇರಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಎಂ.ವಿ. ಸುಬ್ಬಯ್ಯ ನಾಯ್ಡು ವಯಸಿದ್ದರು. ಕಲ್ಯಾಣ್ ಕುಮಾರ್, ಬಿ.ಸರೋಜಾದೇವಿ, ಬಾಲಕೃಷ್ಣ ಸೇರಿದಂತೆ ಸಾಕಷ್ಟು ಕಲಾವಿದರು ಸೇರಿದ್ದರು. ಕನ್ನಡ ಚಲನಚಿತ್ರ ಕಲಾವಿದರ ಸಂಘ ಸ್ಥಾಪನೆ ಠರಾವು ಪಾಸು ಮಾಡಲಾಯಿತು. ಆದರೆ, ಅದು ಆಗಲಿಲ್ಲ. ನಂತರ ಇಂಥದ್ದೊಂದು ಆಸೆ ಹೊತ್ತವರು ಡಾ. ರಾಜ್‌ಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ ಮತ್ತು ನರಸಿಂಹರಾಜು. ಸ್ಥಾಪನೆಯೂ ಆಯಿತು. ಮೊದಲ ಅಧ್ಯಕ್ಷರಾಗಿ ಡಾ.ರಾಜ್‌ಕುಮಾರ್ ಆಯ್ಕೆಯಾದರು. ಅದಕ್ಕೊಂದು ಕಟ್ಟಡ ಬೇಕು ಎಂದು ಮನವಿ ಸಲ್ಲಿಸಲಾಯಿತು. ಸ್ವತಂ ಕಟ್ಟಡದ ಕನಸು ಕನಸಾಗಿಯೇ ಉಳಿಯಿತು. ಅದಕ್ಕೆ ಮತ್ತೆ ಮರು ಜೀವ ನೀಡಿದವರು ಡಾ. ಅಂಬರೀಶ್. ಈ ಎಲ್ಲ ಹಿರಿಯರ ಕನಸೊಂದನ್ನು ಬೃಹತ್ ಕಟ್ಟಡವಾಗಿಸುವ ಮೂಲಕ ನನಸು ಮಾಡಿದರು" ಎಂದು ಡಾ.

ಶರಣು ಹುಲ್ಲೂರು ತಮ್ಮ 'ಅಂಬರೀಶ್ ವ್ಯಕ್ತಿ, ವ್ಯಕ್ತಿತ್ವ, ವರ್ಣರಂಜಿತ ಬದುಕು ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಎಲ್ಲಾ ವರ್ಗದ ಕಲಾವಿದರನ್ನು ಒಂದುಗೂಡಿಸಿ, ಅದಕ್ಕೊಂದು ಸೂರು ಒದಗಿಸುವುದು ಸುಲಭವಾಗಿರಲಿಲ್ಲ. ಎರಡು ದಶಕಗಳ ಕನಸನ್ನು ನನಸಾಗಿಸಲೇಬೇಕೆಂದು ಪಟತೊಟ್ಟರು. ಒಂದು ಸಂಘ ಕಟ್ಟಬೇಕೆಂದು ಕಮುರಿ ಹೋಗಿದ್ದ ಕನಸನ್ನು, ಸರ್ಕಾರದ ಮುಂದೆ ಡಾ. ಅಂಬರೀಶ್ ಪ್ರಸ್ತಾಪನೆ ಮಾಡಿ 2018ರಲ್ಲಿ ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ(ರಿ) ಸ್ಥಾಪನೆ ಮಾಡಿದರು. ಇದು ಹಲವಾರು ಕಲಾವಿದರಿಗೆ ದಾರಿ ದೀಪವಾಗಿದೆ. ದಾಖಲಿಸಬೇಕಾದ ಮತ್ತೊಂದು ಅಂಶವೆಂದರೆ, ಭಾರತೀಯ ಸಿನಿಮಾ ರಂಗದಲ್ಲೇ ಸ್ವಂತ ಕಟ್ಟಡವಿರುವ ಸಿನಿಮಾ ರಂಗ ಎಂಬ ಖ್ಯಾತಿಗೆ ಕನ್ನಡ ಚಿತ್ರೋದ್ಯಮ ಪಾತ್ರವಾಗಿದೆ. ಇದು ಸಾಧ್ಯವಾಗಿದ್ದು ಡಾ. ಅಂಬರೀಶ್ ಅವರ ಶ್ರಮದಿಂದ. ಈಗ ಅನೇಕ ಕಲಾವಿದರಿಗೆ ಈ ಸಂಘ ನೆರಳಾಗಿದೆ.

**ಚಿತ್ರನಗರಿಯ ಕಲ್ಪನೆ**

ಕರ್ನಾಟಕದಲ್ಲಿ ಚಿತ್ರ ನಿರ್ಮಾಣ ಮಾಡುವುದು ಸುಲಭವಲ್ಲ. ಅದಕ್ಕೆ ಬೇಕಾದ ಸೌಲಭ್ಯಗಳು ತೀರಾ ಕಡಿಮೆ. ಶೂಟಿಂಗ್ ಸ್ಥಳಗಳು, ಸ್ಟುಡಿಯೋಗಳು, ತಾಂತ್ರಿಕ ತಜ್ಞರ ಕೊರತೆ ಹೀಗೆ ನಾನಾ ಕೊರತೆಗಳನ್ನು ಕನ್ನಡ ಚಿತ್ರರಂಗ ಎದುರಿಸುತ್ತಿದೆ. ದುಬಾರಿ ಖರ್ಚು ಮಾಡಿಕೊಂಡು ಹೈದರಾಬಾದ್ ರಾಮೋಜಿ ಫಿಲ್ಮ್ ಸಿಟಿಯಲ್ಲಿ ಚಿತ್ರೀಕರಣ ಮಾಡಲಾಗುತ್ತಿದೆ. ಅಥವಾ ಬೇರೆ ಬೇರೆ ರಾಜ್ಯ ಮತ್ತು ದೇಶಗಳಿಗೆ ತೆರಳಿ ತಮಗೆ ಬೇಕಾದ ಚಿತ್ರೀಕರಣ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಶೂಟಿಂಗ್ ಮಾಡಲಾಗುತ್ತಿದೆ. ನಿರ್ಮಾಪಕನಿಗೆ ಇದು ಹೊರೆಯಾದರೂ, ಅನಿವಾರ್ಯವಾಗಿದೆ. ಇದನ್ನು ಅರಿತ ಡಾ. ಅಂಬರೀಶ್ ಅವರು ಸಕಲ ಸೌಲಭ್ಯವಿರುವ ಚಿತ್ರನಗರಿಯಲ್ಲಿ ಕರ್ನಾಟಕದಲ್ಲೇ ಮಾಡಬೇಕೆಂದು ಸಂಕಲ್ಪ ತೊಟ್ಟರು. ಈ ಹಿಂದಿನ ಹಿರಿಯ ಕಲಾವಿದರು ಮತ್ತು ತಂತ್ರಜ್ಞರ ಕನಸು ಇದಾಗಿದ್ದರೂ, ಅದಕ್ಕೆ ವೇಗಿಯ ಚಾಲನೆ ನೀಡಿದವರು ಡಾ. ಅಂಬರೀಶ್.

ಕರ್ನಾಟಕದಲ್ಲೊಂದು ಚಿತ್ರನಗರಿ ತಲೆಯೆತ್ತಲ್ಲಿ ಎನ್ನುವುದು ಹಲವು ವರ್ಷಗಳ ಬೇಡಿಕೆ. ಇವತ್ತಿಗೂ ಅದು ಸಾಧ್ಯವಾಗಿಲ್ಲ. ಹಲವು ಸರಕಾರಗಳು ಬದಲಾದರೂ, ಚಿತ್ರನಗರಿ ಬಗ್ಗೆ ಸಾಕಷ್ಟು ಪ್ರಸ್ತಾಪವಾದರೂ, ಇನ್ನೂ ಈ ಯೋಜನೆ ಕುಂಟುತ್ತಲೇ ಸಾಗಿದೆ. ಆದರೆ, ಅಂಬರೀಶ್ ಇದ್ದಾಗ ಸದಾ ಚಿತ್ರನಗರಿ ಬಗ್ಗೆ ಚರ್ಚೆ ಮಾಡುತ್ತಿದ್ದರು. ಆಯಾ ಅವಧಿಯ ಮುಖ್ಯಮಂತ್ರಿಗಳ ಜತೆ ಸಿನಿಮಾ ಗಣ್ಯರ ನಿಯೋಗ ತಗೆದುಕೊಂಡು ಬೇಡಿಕೆ ಇಟ್ಟಿದ್ದೂ ಇದೆ. ಇನ್ನೇನು ಮೈಸೂರಿನಲ್ಲಿ ಚಿತ್ರನಗರಿ ಪ್ರಾರಂಭವಾಗಲಿದೆ ಎನ್ನುವಾಗ ಅದು, ರಾಮನಗರಕ್ಕೆ ಅಂದಾಯಿತು. ಆಮೇಲೆ ಬೆಂಗಳೂರಿನಲ್ಲಿಯೇ ಚಿತ್ರನಗರಿ ಮಾಡುವ ಪ್ರಸ್ತಾಪ ಉಂಟಾಯಿತು. ಏನೇ ಗೊಂದಗಳಾದರೂ, ಡಾ. ಅಂಬರೀಶ್ ಅವರು ಮಾತ್ರ ಪಟ್ಟು ಬಿಡದೇ ಚಿತ್ರನಗರಿಯ ಬಗ್ಗೆ ಸರಕಾರಗಳಿಗೆ ಎಚ್ಚರಿಸುತ್ತಲೇ ಇದ್ದರು. ಡಾ. ಅಂಬರೀಶ್ ನೇತೃತ್ವದಲ್ಲಿ ನಡೆದ ಚಿತ್ರನಗರಿಯ ಹೋರಾಟ ಕೊನೆಗೂ ತಾರ್ಕಿಕ ಅಂತ್ಯ ಕಂಡಿದೆ. ಚಿತ್ರನಗರಿ ಮಾಡಲು ಸರಕಾರ ಮುಂದಾಗಿದೆ.

**ಸಿನಿಮಾ ರಂಗದ ಪಾಲಿನ ಕರ್ಣ**

ಡಾ. ಅಂಬರೀಶ್ ಸಿನಿಮಾ ರಂಗದ ಪಾಲಿಗೆ ಕರ್ಣನಾಗಿಯೇ ಬದುಕಿದರು. ಕಲಾವಿದರು, ತಂತ್ರಜ್ಞರು ಮತ್ತು ಅನೇಕ ನಿರ್ಮಾಪಕರ ಸಂಕಷ್ಟಕ್ಕೆ ಇವರು ಮಿಡಿದಿದ್ದಾರೆ. ಸಾಕಷ್ಟು ಅಶಕ್ತ ಕಲಾವಿದರ ಬದುಕಿಗೆ ದಾರಿ ದೀಪವಾಗಿದ್ದಾರೆ. ತಮ್ಮ ಸಿನಿಮಾದಲ್ಲಿ ಕೆಲಸ ಮಾಡಿದ ಕಲಾವಿದರ ಹೊರತಾಗಿಯೂ, ಯಾರೇ ಸಂಕಷ್ಟದಲ್ಲಿ ಇದ್ದಾರೆ ಅಂದರೆ ಅಲ್ಲಿ ಅಂಬರೀಶ್ ಅವರ ಸಹಾಯಹಸ್ತ ಇದ್ದೇ ಇರುತ್ತಿತ್ತು. ಅದು ಯಾರಿಗೂ ಗೊತ್ತಾಗದಂತಹ ಕೆಲಸವಾಗಿರುತ್ತಿತ್ತು. ಹಿರಿಯ ನಟ ಸುಧೀರ್, ಪ್ರಭಾಕರ್ ಸೇರಿದಂತೆ ಅನೇಕ ಕಲಾವಿದರ ಸಂಕಷ್ಟಕ್ಕೆ ಅಂಬರೀಶ್ ಸ್ಪಂದಿಸಿದ್ದಾರೆ.

ಕನ್ನಡ ಸಿನಿಮಾ ರಂಗದಲ್ಲಿ ಯಾವುದೇ ಸಮಸ್ಯೆ ಎದುರಾದರೂ ಅದಕ್ಕೆ ತಕ್ಷಣ ಸ್ಪಂದಿಸುತ್ತಿದ್ದ ನಟ ಡಾ. ಅಂಬರೀಶ್. ಒಂದು ರೀತಿಯಲ್ಲಿ ಅಂಬರೀಶ್ ಮನೆ ನ್ಯಾಯಾಲಯವೇ ಆಗಿತ್ತು. ಅಂಬರೀಶ್ ಬಳಿ ಹೋಗುವ ಯಾವುದೇ ವ್ಯಾಜ್ಯಗಳು ಪರಿಹರಿಸಿಕೊಳ್ಳದೇ ಬಂದದ್ದೇ ಇಲ್ಲ.

ಸಿನಿಮಾ ರಂಗವೆಂದರೆ ಅಲ್ಲಿ ಹತ್ತಾರು ಸಮಸ್ಯೆಗಳು ಇದ್ದೇ ಇರುತ್ತಿದ್ದವು. ಕಲಾವಿದರ ವೈಮನಸ್ಸು, ಹಣಕಾಸಿನ ಸಮಸ್ಯೆ, ಚಿತ್ರರಂಗದ ನಾನಾ ವಿಭಾಗಗಳ ಕುಂದುಕೊರತೆ ಹೀಗೆ ನಾನಾ ತೊಂದರೆಗಳಿಗೆ ಡಾ. ಅಂಬರೀಶ್ ಸ್ಪಂದಿಸುತ್ತಿದ್ದರು. 'ಅಂಬರೀಶ್ ಹೇಳಿದ ಮೇಲೆ ಮುಗೀತು. ಅದೇ ಶಾಸನ' ಎನ್ನುವ ಮಾತು ಚಿತ್ರರಂಗದಲ್ಲಿ ನಿತ್ಯಮಂತ್ರವಾಗಿತ್ತು.

ಹಾಗಂತ ಅವರು ಯಾರ ಪರವೂ, ವಿರೋಧವೂ ನಿಲ್ಲುತ್ತಿರಲಿಲ್ಲ. ಸತ್ಯದ ಪರವಾಗಿಯೇ ಅಂಬರೀಶ್ ಇರುತ್ತಿದ್ದರಿಂದ ಅವರ ಮಾತಿಗೆ ಅಲ್ಲಿ ಬೆಲೆಯಿತ್ತು. ತಪ್ಪು ಯಾರದೇ ಆಗಿದ್ದರೂ, ನೇರವಾಗಿ ಖಂಡಿಸುವ ಛಾತಿ ಅವರಿಗಿತ್ತು. ಹಾಗಾಗಿ ಅಂಬರೀಶ್ ಅವರ ಮಾತಿನಿಂದ ಸಿನಿಮಾ ರಂಗದ ಅನೇಕ ಸಮಸ್ಯೆಗಳು ಬಗೆಹರಿದಿವೆ. ಅವೆಲ್ಲ ಕನ್ನಡ ಸಿನಿಮಾ ರಂಗ ಬೆಳವಣಿಗೆಗೆ ಸಹಾಯವಾಗಿವೆ.

"ಅಂಬರೀಶ್ ಅವರ ವ್ಯಕ್ತಿತ್ವ ಹಿರಿದಾದ್ದು. ಸಮಸ್ಯೆ ತಂದವರು ದೊಡ್ಡವರೇ ಆಗಿರಲಿ, ಸಣ್ಣವರೇ ಇರಲಿ. ಅಂಬರೀಶ್ ಮಾತ್ರ ನ್ಯಾಯದ ಪರವಾಗಿ ನಿಲ್ಲುತ್ತಿದ್ದರು. ನೊಂದವರಿಗೆ ಪರಿಹಾರ ನೀಡುತ್ತಿದ್ದರು. ಹಾಗಾಗಿ ಅಂಬರೀಶ್ ಅವರನ್ನು ಕಂಡರೆ ಚಿತ್ರೋದ್ಯಮಕ್ಕೆ ಎಲ್ಲಿಲ್ಲದ ಗೌರವ" ಎಂದು ಪತ್ರಕರ್ತ ನಂದಕುಮಾರ್ ದಾಖಲಿಸಿದ್ದಾರೆ.

ಅಂಬರೀಶ್ ಬದುಕಿರುವ ತನಕ ಸಿನಿಮಾ ರಂಗದ ಬಹುತೇಕ ಸಮಸ್ಯೆಗಳನ್ನು ನ್ಯಾಯಾಲಯ ಮೆಟ್ಟಿಲು ಏರಲು ಬಿಡಲಿಲ್ಲ. ಸತ್ಯದ ಪರವಾಗಿ ನಿಂತು ಪರಿಹಾರ ಕೊಡಿಸಿದರು.

**ಅಧ್ಯಯನದ ಪ್ರಾಮುಖ್ಯತೆ**

ಡಾ. ಅಂಬರೀಶ್ ಸಿನಿಮಾ ರಂಗದ ಪಾಲಿಗೆ ಕೇವಲ ವ್ಯಕ್ತಿಯಾಗಿರಲಿಲ್ಲ. ಅವರೊಂದು ಶಕ್ತಿಯಾಗಿದ್ದರು. ಹಾಗಾಗಿ ಸಿನಿಮಾ ರಂಗದ ಕುರಿತು ಅಧ್ಯಯನ ಮಾಡುವಾಗ ಡಾ. ಅಂಬರೀಶ್ ಅವರ ಪಾತ್ರ ಮಹತ್ವ ಪಡೆದುಕೊಳ್ಳುತ್ತದೆ.

ಪ್ರಸ್ತುತ ಕನ್ನಡ ಚಲನಚಿತ್ರ ರಂಗ ಅಗಾಧವಾದ ಬದಲಾವಣೆ ಕಂಡಿದೆ. ಹಲವಾರು ಹೊಸ ನಟ, ನಟಿಯರು, ತಂತ್ರಜ್ಞರು, ಸಂಗೀತಗಾರರು, ಪ್ರತಿಭಾವಂತ ಕಲಾವಿದರು, ನೃತ್ಯಗಾರರು, ನಿರ್ದೇಶಕರು, ನಿರ್ಮಾಪಕರು ಪರಿಚಯವಾಗುತ್ತ ಹೋಗುತ್ತಿದ್ದಾರೆ. ಅವರೆಲ್ಲರಿಗೂ ಮಾದರಿಯಾಗುವಂತೆ ಚಲನಚಿತ್ರ ರಂಗದಲ್ಲಿ ತನ್ನದೇ ಆದ ಶೈಲಿಯಲ್ಲಿ ಛಾಪು ಮೂಡಿಸಿದ ಧೀಮಂತ ನಟ ಡಾ. ಅಂಬರೀಶ್. ಇವರ ನಟನೆಯ ಪಾತ್ರಗಳು, ಚಿತ್ರಗಳು ಸಿನಿಮಾ ರಂಗದ ಪಾಲಿಗೆ ಮಾದರಿ.

ಡಾ. ಅಂಬರೀಶ್ ಕೇವಲ ಸಿನಿಮಾಗಳ ಪಾತ್ರಕ್ಕಷ್ಟೇ ಸೀಮಿತವಾಗಿರದೇ, ನಿಜ ಜೀವನದಲ್ಲೂ ಕಷ್ಟಕ್ಕೆ ಸ್ಪಂದಿಸಿದ್ದಾರೆ. ಅನ್ಯಾಯಕ್ಕೆ ಸಿಡಿದೆದ್ದಿದ್ದಾರೆ. ಸಿನಿಮಾ ರಂಗದ ಬೆಳವಣಿಗೆಗೆ ಪೂರಕವಾಗುವ ಕೆಲಸಗಳನ್ನು ಮಾಡಿದ್ದಾರೆ. ಹಿರಿಯರು ಕಟ್ಟಿದ ಅದೆಷ್ಟೋ ಕನಸುಗಳನ್ನು ನನಸು ಮಾಡಿದ್ದಾರೆ. ಕನ್ನಡ ಸಿನಿಮಾ ರಂಗ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಆಗಿದ್ದರ ಹಿಂದೆ

ಡಾ. ಅಂಬರೀಶ್ ಅವರ ಪಾಲೂ ಇದೆ.
ಈ ಹಿನ್ನೆಲೆಯಲ್ಲಿ ಈ ಅಧ್ಯಯನ ಹೆಚ್ಚು ಪ್ರಾಮುಖ್ಯತೆ ಹೊಂದಿದೆ.

**ಸಾರಾಂಶ**

'ಕನ್ನಡ ಸಿನಿಮಾ ರಂಗಕ್ಕೆ ಡಾ. ಅಂಬರೀಶ್ ಅವರು ಕೊಟ್ಟ ಕೊಡುಗೆ ಒಂದು ಅಧ್ಯಯನ'ದ ಈ ಎಲ್ಲ ಸಾರಾಂಶಗಳ ಅಧ್ಯಯನದಿಂದ ನಾವು ಪಡೆದುಕೊಂಡ ಫಲಿತಾಂಶವೆಂದರೆ,

- ಡಾ. ಅಂಬರೀಶ್ ಸಿನಿಮಾ ರಂಗದ ಪಾಲಿನ ರಿಯಲ್ ಹೀರೋ. ಅವರು ಸಿನಿಮಾಗಳ ಪಾತ್ರಗಳು, ಆಯ್ಕೆ ಮಾಡಿಕೊಂಡ ಕಥಾವಸ್ತು, ಅದನ್ನು ನಿರ್ವಹಿಸಿದ ರೀತಿಯ ಹೊರತಾಗಿಯೂ ಚಿತ್ರರಂಗ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಹಾಗಾಗಿ ಎಲ್ಲರ ನೆಚ್ಚಿನ ನಾಯಕರಾಗಿದ್ದಾರೆ.
- ಬರೀ ಪಾತ್ರಗಳಾಗಿ ಉಳಿಯದೇ ವ್ಯಕ್ತಿಯಾಗಿ ಅವರು ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಅವು ಇತರರಿಗೂ ಮಾದರಿಯಾಗಿವೆ.
- ಕನ್ನಡ ಸಿನಿಮಾ ರಂಗದ ಅನೇಕ ಹಿರಿಯರು ಕಂಡ ಕನಸುಗಳನ್ನು ಡಾ. ಅಂಬರೀಶ್ ನೆರವೇರಿಸಿದ್ದಾರೆ.
- ಕಲಾವಿದರ ಸಂಘದ ಕಟ್ಟಡ, ಚಿತ್ರನಗರಿಯಂತಹ ಪ್ರಮುಖ ಯೋಜನೆಗಳಿಗೆ ಡಾ. ಅಂಬರೀಶ್ ಕೊಡುಗೆ ಅಪಾರ.
- ಕನ್ನಡ ಸಿನಿಮಾ ರಂಗಕ್ಕೆ ತೊಂದರೆಯಾದಾಗ, ಕಲಾವಿದರು ಮತ್ತು ತಂತ್ರಜ್ಞರು ಕಷ್ಟಕ್ಕೆ ಸಿಲುಕಿದಾಗ, ಅವರೆಲ್ಲ ಪರಿಹಾರ ಹುಡುಕಿಕೊಂಡು ಬರುತ್ತಿದ್ದದ್ದು ಅಂಬರೀಶ್ ಅವರ ಬಳಿಗೆ. ಡಾ. ರಾಜ್ ಕುಮಾರ್ ನಂತರ ಸಿನಿಮಾ ರಂಗವನ್ನು ಮುನ್ನೆಡೆಸಿಕೊಂಡು ಹೋದ ನಟ.
- ಅಂಬರೀಶ್ ಅವರ ಸಿನಿಮಾಗಳು ಅನೇಕ ರೀತಿಯಲ್ಲಿ ಮಾದರಿಗಳಾಗಿವೆ. ಸಿನಿಮಾಗಳ ಪಠ್ಯದಂತೆಯೇ ಕೆಲವು ಚಿತ್ರಗಳನ್ನು ಅಭ್ಯಸಿಸಲಾಗುತ್ತಿದೆ.

**ಉಪಸಂಹಾರ**

ಡಾ. ಅಂಬರೀಶ್ ಅವರು ಸಿನಿಮಾ ರಂಗಕ್ಕೆ ಕೊಟ್ಟ ಕೊಡುಗೆ ಅಪಾರ. ಭಾರತೀಯ ಸಿನಿಮಾ ರಂಗದಲ್ಲೇ ಆಗದಿರುವಂತಹ ಅನೇಕ ಕಾರ್ಯಗಳು ಕನ್ನಡ ಚಿತ್ರರಂಗದಲ್ಲಿ ಆಗಿವೆ. ಅದರ ಹಿಂದಿನ ಶಕ್ತಿ ಡಾ. ಅಂಬರೀಶ್ ಅವರೇ ಆಗಿದ್ದಾರೆ. ಅವರು ಸಿನಿಮಾ ರಂಗಕ್ಕೆ ಒಂದು ರೀತಿಯಲ್ಲಿ ಮಾದರಿ. ಡಾ.ರಾಜ್ ಕುಮಾರ್ ನಂತರ ಸಿನಿಮಾ ರಂಗದ ಮುಂದಾಳತ್ವ ವಹಿಸುವವರು ಯಾರು? ಎಂಬ ಪ್ರಶ್ನೆ ಬಂದಾಗ ತಕ್ಷಣವೇ ಉತ್ತರವಾಗಿ ನಿಂತದ್ದು ಇದೇ ಡಾ. ಅಂಬರೀಶ್ ಹೆಸರು. ಅದನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋದರು. ತೆರೆಯ ಮೇಲೆ, ತೆರೆಯ ಹಿಂದಿನ ಬದುಕಿನಲ್ಲಿ ಅಷ್ಟೇನೂ ವ್ಯತ್ಯಾಸವಾಗದೇ, ವ್ಯಕ್ತಿ ಮತ್ತು ವ್ಯಕ್ತಿತ್ವದ ಸ್ಪಷ್ಟ ನಿಲುವಿನಲ್ಲಿ ಬದುಕಿದರು. ಹಾಗಾಗಿ ಡಾ. ಅಂಬರೀಶ್ ಅವರು ಸಿನಿಮಾ ರಂಗಕ್ಕೆ ಕೊಟ್ಟ ಕೊಡುಗೆ ಯಾವತ್ತಿಗೂ ಜೀವಂತ.

**ಗ್ರಂಥ ಋಣ**

1. ನವಿಲೂರು ತೇಜಸ್ವಿ (1994) ಭಾರತೀಯ ಚಲನಚಿತ್ರರಂಗ ಬೆಳೆದು ಬಂದದಾರಿ
2. ಕನ್ನಡದ ಭಾಗ್ಯ: ಅಂಬರೀಶ್ ಅಭಿನಂದನ ಗ್ರಂಥ (2002): ಶೈಲಜ ಸಿ.ವಿ
3. ಅಂಬರೀಶ್ ಎಂಬ ಚುಂಬಕ ಶಕ್ತಿ (2005): ಬಿ.ಗಣಪತಿ
4. ದಿಲ್‌ದಾರನ ಅಂತರಂಗ (2013): ಎ. ಬಾಲಚಂದ್ರ
5. ಅಂಬರೀಶ್ –ವ್ಯಕ್ತಿ, ವ್ಯಕ್ತಿತ್ವ, ವರ್ಣರಂಜಿತ ಬದುಕು (2018): ಡಾ.ಶರಣು ಹುಲ್ಲೂರು
6. ಕನ್ನಡ ಚಲನಚಿತ್ರ ಇತಿಹಾಸ : ಸಂ. ಡಾ. ವಿಜಯಾ
7. ನವೆಂಬರ್ 25, 2018ರ ವಿಜಯಕರ್ನಾಟಕ–ವೃತ್ತಪತ್ರಿಕೆ ವಿಶೇಷ ಸಂಚಿಕೆ